ಅಭಿವೃದ್ಧಿ ಕೆಲಸಗಳು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗಿರುವುದು

368 : (461)

ಡಾ ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ಯಾದಗಿರಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಬಹುತೇಕ ಇಲಾಖೆಗಳಿಗೆ ಪ್ರಭಾರ ಅಧಿಕಾರಿಗಳು ನೇಮಕಗೊಂಡಿದ್ದು, ಖಾಯಂ ಅಧಿಕಾರಿಗಳಿಲ್ಲದೆ ಅಭಿವೃದ್ಧಿ ಕೆಲಸಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರಭಾರ ಅಧಿಕಾರಿಗಳು ಅವರ ಜಿಲ್ಲೆಗಳ ಕೆಲಸಗಳಲ್ಲಿ/ತಲ್ಲಿನರಾಗಿ ಈ ಜಿಲ್ಲೆಯತ್ತ ಕಣ್ಣು ಹಾಯಿಸಲು ಸಾಧ್ಯವಾಗದೆ ಈ ಜನತೆಗೆ ತೊಂದರೆಯಾಗಿದ್ದರೂ ಸರ್ಕಾರ ಈವರೆಗೂ ಖಾಯಂ ಅಧಿಕಾರಿಗಳ ನೇಮಕಕ್ಕೆ ಕ್ರಮ ಕೈಗೊಂಡಿಲ್ಲದಿರುವುದಕ್ಕೆ ಕಾರಣವೇನು;

ಇ) ಬಹುತೇಕ ಇಲಾಖೆಗಳಲ್ಲಿ ಪ್ರಭಾರ ಅಧಿಕಾರಿಗಳು ಇಲ್ಲದೇ ಕೇವಲ ಎಫ್‌ಡಿಎ/ಸೂಪರಿಡೆಂಟ್‌ರಿಂದಲೇ ಕಛೇರಿ ನಡೆಯುತ್ತಿದ್ದು, ಅವರಿಗೆ ಯಾವುದೇ ಕ್ರಮ ಕೈಗೊಳ್ಳುವ ಅಧಿಕಾರವಿಲ್ಲದೆ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಕೆಲವು ಕಛೇರಿಗಳಲ್ಲಿ ಅಧಿಕಾರಿಗಳಿದ್ದರೆ ಸಿಬ್ಬಂದಿಗಳಿರುವುದಿಲ್ಲ. ಸಿಬ್ಬಂದಿಗಳಿದ್ದರೆ ಅಧಿಕಾರಿಗಳಿಲ್ಲದೆ ಕಂಪ್ಯೂಟರ್, ದೂರವಾಣಿಗಳಂತಹ ಸೌಲಭ್ಯಗಳು ಇಲ್ಲದೆ ಸಾರ್ವಜನಿಕ ಕೆಲಸಕ್ಕೆ ತೊಂದರೆಯಾಗಿ ಹಿಂದುಳಿದ ಜಿಲ್ಲೆ ಅಭಿವೃದ್ಧಿಯಿಂದ ವಂಚಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ:

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಜಗದೀಶ್‌ಶೆಟ್ಟರ್ (ಮಾನ್ಯ ಮುಖ್ಯಮಂತ್ರಿ)

ಅ) ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 70 ಜಿಲ್ಲಾ ಮಟ್ಟದ ಅಧಿಕಾರಿಗಳ ಹುದ್ದೆಗಳು ಇದ್ದು,ಆ ಪೈಕಿ 20 ಇಲಾಖೆಗಳಲ್ಲಿ ಪ್ರಭಾರ ಅಧಿಕಾರಿಗಳಿರುತ್ತಾರೆ.

ಆ) ಜಿಲ್ಲೆಯಲ್ಲಿ ಇರುವ ಖಾಲಿ ಹುದ್ದೆಗಳನ್ನು ಅಗತ್ಯಕ್ಕನುಗುಣವಾಗಿ ಜಾರಿಯಲ್ಲಿರುವ ನಿಯಮಗಳನ್ವಯ ಹಂತ ಹಂತವಾಗಿ ಭರ್ತಿ ಮಾಡಲಾಗುವುದು.

ಇ) ಇಲಾಖೆಗಳಲ್ಲಿ ಖಾಲಿಯಿರುವ ಅಧಿಕಾರಿ ಹುದ್ದೆಗಳನ್ನು ಪ್ರಭಾರ ವ್ಯವಸ್ಥೆಯ ಮುಖಾಂತರ ಭರ್ತಿ ಮಾಡಲಾಗಿರುತ್ತದೆ.

ಈ) ಜಿಲ್ಲಾ ಮಟ್ಟದ ಎಲ್ಲಾ ಕಚೇರಿಗಳಿಗೆ ನೂತನ ಜಿಲ್ಲೆ ರಚನೆಯಾದ ನಂತರ ಜಿಲ್ಲೆಗೆ ಬಿಡುಗಡೆಯಾದ ಅನುದಾನದಲ್ಲಿ ಕಂಪ್ಯೂಟರ್, ದೂರವಾಣಿ ಪಿಠೋಪಕರಣಗಳನ್ನು ಸರಬರಾಜು ಮಾಡಲಾಗಿದೆ.

ಉ) ಆ)ಗೆ ನೀಡಿರುವ ಉತ್ತರವೇ ಅನ್ವಯವಾಗುತ್ತದೆ.

ಮುಸ್ಲಿಂ ಬಾಂಧವರ ಸ್ಮಶಾನ ಅಭಿವೃದ್ಧಿ

458 : (663)

ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ)

ಅ) ಬಾಗೇಪಲ್ಲಿ – ಗುಡಿಬಂಡೆ ತಾಲ್ಲೂಕುಗಳಲ್ಲಿರುವ ಮುಸ್ಲೀಂ ಬಾಂಧವರ ರುದ್ರಭೂಮಿಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು);

ಆ) ಈ ರುದ್ರಭೂಮಿಗಳು ಅಭಿವೃದ್ಧಿ ಇಲ್ಲದೇ ಗೋರಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಇವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಎಸ್.ಕೆ.ಬೆಳ್ಳುಬ್ಬಿ

ಕೃಷಿ ಮಾರುಕಟ್ಟೆ, ವಕ್ಫ್ ಮತ್ತು ಹಜ್ ಸಚಿವರು

ಅ) ಬಾಗೇಪಲ್ಲಿ ತಾಲೂಕಿನಲ್ಲಿ 32 ಮತ್ತು ಗುಡಿಬಂಡೆ ತಾಲೂಕಿನಲ್ಲಿ 09 ಮುಸ್ಲೀಂ ಭಾಂದವರ ರುದ್ರಭೂಮಿಗಳಿರುತ್ತವೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಬಂದಿದೆ.